ಪುನ್ನಾಟ ಸಂಘೀಯ ಶ್ರೀ ಜಿನಸೇನಾಚಾರ್ಯ ವಿರಚಿತ
ಹರಿವಂಶಪುರಾಣದ ಸಂಗ್ರಹಾನುವಾದ

# ಹರಿವಂಶ ಪುರಾಣಸಾರ

ಡಾ॥ ಟಿ.ವಿ. ವೆಂಕಟಾಚಲ ಶಾಸ್ತ್ರೀ



## ಪರಿವಿಡಿ


| | | |
|---|---|---|
| | ಮುನ್ನುಡಿ | v |
| | ಅರಿಕೆ | xiii |
| | ಪ್ರಸ್ತಾವನೆ | xv |
| ೧ | ಸಂಗ್ರಹವಿಭಾಗ ವರ್ಣನ | 1 |
| ೨ | ಧರ್ಮತೀರ್ಥ ಪ್ರವರ್ತನ | 5 |
| ೩ | ಶ್ರೇಣಿಕಪ್ರಶ್ನ ವರ್ಣನ | 7 |
| ೪ | ಆಧೋಲೋಕ ಸಂಸ್ಥಾನ ವರ್ಣನ | 10 |
| ೫ | ದ್ವೀಪಸಾಗರ ವರ್ಣನ | 11 |
| ೬ | ಜ್ಯೋತಿರ್ಲೋಕೋರ್ಧ್ವಲೋಕ ವರ್ಣನ | 16 |
| ೭ | ಕಾಲ ಕುಲಕರೋತ್ಪತ್ತಿ ವರ್ಣನ | 18 |
| ೮ | ಋಷಭನಾಥ ಜನ್ಮಾಭಿಷೇಕ ವರ್ಣನ | 20 |
| ೯ | ಋಷಭನಾಥ ಕೈವಲ್ಯೋತ್ಪತ್ತಿ ವರ್ಣನ | 22 |
| ೧೦ | ಪ್ರಥಮತೀರ್ಥಕರ ಧರ್ಮತೀರ್ಥ ಪ್ರವರ್ತನ | 25 |
| ೧೧ | ಭರತದಿಗ್ವಿಜಯ ವರ್ಣನ | 26 |
| ೧೨ | ವೃಷಭೇಶ್ವರ ಪರಿನಿರ್ವಾಣ ವರ್ಣನ | 29 |
| ೧೩ | ಇಕ್ಷ್ವಾಕುವಂಶ ವರ್ಣನ | 30 |
| ೧೪ | ಸುಮುಖವನಮಾಲಾ ವರ್ಣನ | 31 |
| ೧೫ | ಹರಿವಂಶೋತ್ಪತ್ತಿ ವರ್ಣನ | 35 |
| ೧೬ | ಮುನಿಸುವ್ರತನಾಥ ಪಂಚಕಲ್ಯಾಣ ವರ್ಣನ | 39 |
| ೧೭ | ವಸೂಪಾಖ್ಯಾನದಲ್ಲಿ ನಾರದ ಪರ್ವತವಿವಾದ ವರ್ಣನ | 41 |
| ೧೮ | ಸಮುದ್ರವಿಜಯ ರಾಜ್ಯಲಾಭ ವರ್ಣನ | 49 |
| ೧೯ | ಗಾಂಧರ್ವಸೇನಾ ವರ್ಣನ | 56 |
| ೨೦ | ವಿಷ್ಣುಕುಮಾರಮಾಹಾತ್ಮ್ಯ ವರ್ಣನ | 65 |
| ೨೧ | ಚಾರುದತ್ತ ಚರಿತ ವರ್ಣನ | 70 |
| ೨೨ | ನೀಲಯಶೋಲಾಭ ವರ್ಣನ | 82 |
| ೨೩ | ಸೋಮಶ್ರೀಲಾಭ ವರ್ಣನ | 87 |
| ೨೪ | ಮದನವೇಗಾಲಾಭ ವರ್ಣನ | 92 |
| ೨೫ | ಮದನವೇಗಾಲಾಭ ತ್ರಿಶಿಖರವಧ ವರ್ಣನ | 98 |
| ೨೬ | ಬಾಲಚಂದ್ರಾದರ್ಶನ ವರ್ಣನ | 101 |
| ೨೭ | ಸಂಜಯಂತಪುರಾಣ ವರ್ಣನ | 105 |
| ೨೮ | ಮೃಗಧ್ವಜ ಮಹಿಷೋಪಾಖ್ಯಾನ ವರ್ಣನ | 113 |
| ೨೯ | ಬಂಧುಮತೀ ಪ್ರಿಯಂಗುಸುಂದರೀಲಾಭ ವರ್ಣನ | 116 |
| ೩೦ | ಪ್ರಭಾವತೀಲಾಭ ವರ್ಣನ | 120 |
| ೩೧ | ರೋಹಿಣೀ ಸ್ವಯಂವರ ಭ್ರಾತೃಸಮಾಗಮ ವರ್ಣನ | 123 |
| ೩೨ | ಸಕಲಬಂಧು ವಧೂಸಮಾಗಮ ವರ್ಣನ | 130 |
| ೩೩ | ಕಂಸೋಪಾಖ್ಯಾನ ಬಲದೇವ ವಾಸುದೇವ ದೇವಕೀತನಯಾಗಾರಚರಿತ ವರ್ಣನ | 132 |
| ೩೪ | ಮಹೋಪವಾಸವಿಧಿ ವರ್ಣನ | 144 |
| ೩೫ | ಕೃಷ್ಣಬಾಲಕ್ರೀಡಾ ವರ್ಣನ | 147 |
| ೩೬ | ಕಂಸಾಪರಾಜಿತವಧ ವರ್ಣನ | 154 |
| ೩೭ | ಸ್ವಪ್ನಫಲಕಥನ | 160 |
| ೩೮ | ಜನ್ಮಾಭಿಷೇಕ ವರ್ಣನ | 162 |
| ೩೯ | ಜನ್ಮಾಭಿಷೇಕ-ಇಂದ್ರಸ್ತುತಿ ವರ್ಣನ | 164 |
| ೪೦ | ಹರಿವಂಶಯಾದವ ಪ್ರಸ್ಥಾನ ವರ್ಣನ | 166 |
| ೪೧ | ದ್ವಾರವತೀನಿವೇಶ ವರ್ಣನ | 168 |
| ೪೨ | ರುಕ್ಮಿಣೀಹರಣ ವರ್ಣನ | 169 |
| ೪೩ | ಶಂಬಪ್ರದ್ಯುಮ್ನ ವರ್ಣನ | 174 |
| ೪೪ | ಜಾಂಬವತ್ಯಾದಿ ಮಹಾದೇವೀಲಾಭ ವರ್ಣನ | 187 |
| ೪೫ | ಕುರುವಂಶೋತ್ಪತ್ತಿ ಪಾಂಡವ ಧಾರ್ತರಾಷ್ಟ್ರಸಮಾಗಮ-ಪಾರ್ಥದ್ರೌಪದೀಲಾಭ ವರ್ಣನ | 190 |
| ೪೬ | ಕೀಚಕನಿರ್ವಾಣಗಮನ | 198 |
| ೪೭ | ಕುರುವಂಶಪ್ರದ್ಯುಮ್ನ ಮಾತೃಪಿತೃಸಮಾಗಮ ವರ್ಣನ | 201 |
| ೪೮ | ಯದುಕುಲ ಕುಮಾರೋದ್ದೇಶ ವರ್ಣನ | 210 |
| ೪೯ | ದುರ್ಗೋತ್ಪತ್ತಿ ವರ್ಣನ | 214 |
| ೫೦ | ಚಕ್ರಗರುಡವ್ಯೂಹ ವರ್ಣನ | 217 |
| ೫೧ | ಹಿರಣ್ಯನಾಭವಧ ವರ್ಣನ | 223 |
| ೫೨ | ಜರಾಸಂಧವಧ ವರ್ಣನ | 224 |
| ೫೩ | ಕೃಷ್ಣವಿಜಯ ವರ್ಣನ | 228 |
| ೫೪ | ದ್ರೌಪದೀಹರಣಾಹರಣ ದಕ್ಷಿಣಮಥುರಾನಿವೇಶ ವರ್ಣನ | 231 |
| ೫೫ | ಭಗವನ್ನಿಷ್ಕ್ರಮಣಕಲ್ಯಾಣ ವರ್ಣನ | 236 |

| | | |
|---|---|---|
| ೫೬ | ಭಗವನ್ನೇಮಿನಾಥ ಕೇವಲಜ್ಞಾನ ವರ್ಣನ .... | 242 |
| ೫೭ | ಸಮವಸರಣ ವರ್ಣನ .... | 245 |
| ೫೮ | ಶ್ರೀನೇಮಿನಾಥ ಧರ್ಮೋಪದೇಶ ವರ್ಣನ .... | 249 |
| ೫೯ | ಭಗವದ್ವಿಹಾರ ವರ್ಣನ .... | 253 |
| ೬೦ | ತ್ರಿಷಷ್ಟಿಪುರುಷಜಿನಾಂತರ ವರ್ಣನ .... | 256 |
| ೬೧ | ದ್ವಾರಾವತೀವಿನಾಶ ವರ್ಣನ .... | 261 |
| ೬೨ | ಹರಿಗತ್ಯಂತರ ವರ್ಣನ .... | 265 |
| ೬೩ | ಬಲದೇವತಪೋವರ್ಣನ .... | 279 |
| ೬೪ | ಯುಧಿಷ್ಠಿರಾದಿ ಪಂಚಪಾಂಡವಪ್ರವ್ರಜ್ಯಾ ವರ್ಣನ .... | 283 |
| ೬೫ | ಭಗವನ್ನಿರ್ವಾಣ ವರ್ಣನ .... | 296 |
| ೬೬ | ಗುರುಪಾದಕಮಲ ವರ್ಣನ .... | 289 |


# ಹರಿವಂಶಪುರಾಣಸಾರ

## ೧. ಸಂಗ್ರಹವಿಭಾಗ ವರ್ಣನ

ಸಿದ್ಧವೂ ಅನಾದಿಯೂ ಸಾದಿಯೂ ಆದ ಜಿನಶಾಸನವು ಮಂಗಳರೂಪಿಯಾದುದು. ತನ್ನ ನಿರ್ಮಲಜ್ಞಾನದಿಂದ ಲೋಕಾಲೋಕಗಳನ್ನು ಬೆಳಗುತ್ತಿರುವ ಸೂರ್ಯನಂತಿರುವ ವರ್ಧಮಾನಜಿನೇಂದ್ರನಿಗೆ ನಮಸ್ಕಾರ. ಸರ್ವಜ್ಞನೂ ಯುಗಾರಂಭದ ವ್ಯವಸ್ಥೆಗಳನ್ನು ಸಾಂಗಗೊಳಿಸಿದವನೂ ಸ್ವಯಂಬುದ್ಧನೂ ಆದ ವೃಷಭನಾಥನಿಗೆ ನಮಸ್ಕಾರ. ಈ ಅವಸರ್ಪಿಣಿಯ ತೃತೀಯ ಮತ್ತು ಚತುರ್ಥ ಕಾಲಗಳಲ್ಲಿ ಧರ್ಮತೀರ್ಥಗಳ ಪ್ರವರ್ತಕರಾದ ಎಲ್ಲ ಜಿನೇಂದ್ರರೂ ನಮಗೆ ಮಂಗಳಪ್ರದರಾಗಲಿ. ಅನಂತಾನಂತರಾದ ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧುಗಳೆಂಬ ಪಂಚಪರಮೇಷ್ಠಿಗಳು ಎಲ್ಲ ದೇಶಕಾಲಗಳಲ್ಲಿಯೂ ಮಂಗಳಸ್ವರೂಪರಾಗಿರಲಿ.

ನಾನೀಗ ಬದ್ಧಮೂಲವಾದ ಹರಿವಂಶಪುರಾಣವನ್ನು ಬಿತ್ತರಿಸುತ್ತೇನೆ. ಈ ಭೂಮಿಯಲ್ಲಿ ಈ ಪುರಾಣವು ಅತ್ಯಂತ ಪ್ರಸಿದ್ಧವೂ ಅನೇಕ ಕಥೆ ಉಪಕಥೆಗಳಿಂದ ಕೂಡಿದುದೂ ಪವಿತ್ರವೂ ಕಲ್ಪವೃಕ್ಷಕ್ಕೆ ಸಮಾನವೂ ಶ್ರೀ ನೇಮಿನಾಥತೀರ್ಥಂಕರನ ಚರಿತ್ರೆಯಿಂದ ಬೆಳಗುವಂತಹುದೂ ಆಗಿ ಎಲ್ಲರ ಮನಸ್ಸನ್ನೂ ಅಪಹರಿಸುವಂತಿದೆ. ಯಾವ ರೀತಿಯಲ್ಲಿ ಸೂರ್ಯನಿಂದ ಪ್ರಕಾಶಿತವಾದ ಪದಾರ್ಥಗಳನ್ನು ಅತಿಸಾಮಾನ್ಯ ತೇಜದ ಹರಳು, ಸೊಡರು ಮೊದಲಾದವು ಯಥಾಯೋಗ್ಯವಾಗಿ ಎಂದರೆ ತಂತಮ್ಮ ಶಕ್ತಿಗೆ ಅನುಸಾರವಾಗಿ ಪ್ರಕಾಶಿತವನ್ನಾಗಿ ಮಾಡುವುವೋ, ಹಾಗೆಯೇ ಮಹಾತ್ಮರಿಂದ ಬೆಳಗಿದ ಈ ಪುರಾಣವನ್ನು ಮತ್ತೆ ಬೆಳಗುವುದರಲ್ಲಿ ನನ್ನಂಥ ಅಲ್ಪಶಕ್ತಿಯುವನು ಕೂಡ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರವೃತ್ತನಾಗಿರುವನು. ಶ್ರೀ ವರ್ಧಮಾನಜಿನನ ಮುಖದಿಂದ ಶ್ರೀ ಗೌತಮಗಣಧರನು ಶ್ರುತವನ್ನು ಧಾರಣಮಾಡಿದನು. ಅಲ್ಲಿಂದ ಮುಂದೆ ಈ ಆಗಮದ ಒಂದಂಶವು ಅನ್ಯ ಆಚಾರ್ಯರಿಂದ ವಿಸ್ತರಿಸಲ್ಪಟ್ಟಿತು. ಅದರ ಒಂದಂಶವನ್ನೇ ಮುಂದೆ ಇಲ್ಲಿ ಹೇಳಲಾಗುತ್ತದೆ. ಈ ಗ್ರಂಥದಲ್ಲಿ ವರ್ಣಿತವಾದ್ದು ಈ ಹಿಂದೆ ಪೂರ್ವಾಚಾರ್ಯರಿಂದ ಪ್ರಸಿದ್ಧವಾದ್ದೇ ; ಆದರೂ ಶಾಸ್ತ್ರವಿಸ್ತಾರಭೀರುಗಳಿಗಾಗಿ, ಇದರಲ್ಲಿ ಸಂಕ್ಷೇಪವಾಗಿ ಸಾರಭೂತ ಪದಾರ್ಥಗಳು ಸಂಗ್ರಹಮಾಡಲ್ಪಟ್ಟಿವೆ. ಈ ದೃಷ್ಟಿಯಿಂದ ಇದು ಅಪೂರ್ವ, ನವೀನ.

ನಿರ್ಮಲಭಾವದಿಂದ ಈ ಪುರಾಣವನ್ನು ಸದಾಕಾಲವೂ ಓದುವ ಅಥವಾ ಕೇಳುವ ಭವ್ಯರಿಗೆ ಇದು ಕಲ್ಯಾಣವನ್ನುಂಟುಮಾಡುತ್ತದೆ. ಸ್ವಾಧ್ಯಾಯವೇ ಪರಮತಪಸ್ಸು. ಈ ಪುರಾಣದ ಅರ್ಥವು ಉತ್ತಮ ಪುರುಷಾರ್ಥಗಳನ್ನು ಉಂಟುಮಾಡುವುದೇ ಆದ್ದರಿಂದ, ದೇಶಕಾಲಜ್ಞರಾದ ಮನುಷ್ಯರಿಗೆ ಮಾತ್ಸರ್ಯಭಾವ ಬಿಟ್ಟು ಇದರ ಕಥನ ಮತ್ತು ಶ್ರವಣ ಮಾಡತಕ್ಕದ್ದು ಅಗತ್ಯ.

ಈ ಪುರಾಣದಲ್ಲಿ ಲೋಕಸಂಸ್ಥಾನ, ರಾಜವಂಶೋದ್ಭವ, ಹರಿವಂಶಾವತಾರ, ವಸುದೇವವಿಚೇಷ್ಟಿತ, ನೇಮಿನಾಥಚರಿತ, ದ್ವಾರವತಿಯ ನಿರ್ಮಾಣ, ಯುದ್ಧವರ್ಣನ, ನಿರ್ವಾಣ—ಎಂಬ ಎಂಟು ಶುಭ ಅಧಿಕಾರಗಳು ಹೇಳಲ್ಪಟ್ಟಿವೆ. ಇವು ಸಂಗ್ರಹದ ದೃಷ್ಟಿಯಿಂದ ಸಂಗ್ರಹಿತವೂ, ಅವಾಂತರ ಅಧಿಕಾರಗಳಿಂದ ಅಲಂಕೃತವೂ, ಪೂರ್ವಾಚಾರ್ಯರ ಮೂಲಕ ನಿರ್ಮಿತವಾದ ಶಾಸ್ತ್ರಗಳನ್ನು ಅನುಸರಿಸುವ ಮುನಿಗಳಿಂದ ಸೂತ್ರಿತವೂ ಆದುವಾಗಿವೆ. ವಸ್ತುನಿರೂಪಣೆಯಲ್ಲಿ ವಿಭಾಗರೂಪ, ವಿಸ್ತಾರರೂಪ ಎಂದು ಎರಡು ರೀತಿ. ಇವುಗಳಲ್ಲಿ ವಿಭಾಗರೂಪದ ನಿರೂಪಣೆಯನ್ನು ಇಲ್ಲಿ ಮಾಡಿದೆ :

ವರ್ಧಮಾನ ಜಿನೇಂದ್ರನ ಧರ್ಮತೀರ್ಥಪ್ರವರ್ತನ, ಗಣಧರಸಂಖ್ಯೆ, ಜಿನೇಂದ್ರನ ರಾಜಗೃಹಾಗಮನ; ಗೌತಮ ಶ್ರೇಣಿಕ ಪ್ರಶ್ನೆ, ಕ್ಷೇತ್ರಕಾಲ ನಿರೂಪಣ, ಕುಲಕರೋತ್ಪತ್ತಿ, ವೃಷಭದೇವೋತ್ಪತ್ತಿ ; ಕ್ಷತ್ರಿಯಾದಿ ವರ್ಣನಿರೂಪಣೆ, ಹರಿವಂಶ ಪ್ರವರ್ತನ, ಆ ವಂಶದಲ್ಲಿ ಮುನಿಸುವ್ರತನಾಥನ ಜನನ, ದಕ್ಷ ಪ್ರಜಾಪತಿಯ ವೃತ್ತ, ವಸು ವೃತ್ತಾಂತ, ಅಂಧಕವೃಷ್ಣಿಯ ಪುತ್ರಜನನ, ಸುಪ್ರತಿಷ್ಠಮುನಿಯ ಕೇವಲಜ್ಞಾನಪ್ರಾಪ್ತಿ, ಅಂಧಕವೃಷ್ಣಿಯ ದೀಕ್ಷೆ, ಸಮುದ್ರವಿಜಯನ ರಾಜ್ಯ, ವಸುದೇವನ ಸೌಭಾಗ್ಯ, ವಸುದೇವನು ಉಪಾಯದಿಂದ ಹೊರಬಿದ್ದುದು, ಅವನಿಗೆ ಅಲ್ಲಿ ಸೋಮಾ ಮತ್ತು ವಿಜಯಸೇನಾ ಎಂಬ ಕನ್ಯೆಯರ ಲಾಭವಾದುದು, ವನ್ಯಹಸ್ತಿಯನ್ನು ಅಂಕೆಗೆ ತಂದುದು, ಶ್ಯಾಮಾ ಎಂಬವಳನ್ನು ಕೂಡಿದುದು, ಅಂಗಾರಕನಿಂದ ವಸುದೇವನ ಹರಣ, ಚಂಪಾನಗರಿಯಲ್ಲಿ ಅವನನ್ನು ವಿಮೋಚನಮಾಡಿದುದು, ಅಲ್ಲಿ ಗಂಧರ್ವಸೇನೆಯ ಲಾಭ, ಮುನಿ ವಿಷ್ಣುಕುಮಾರನ ವಿಚೇಷ್ಟಿತ, ಚಾರುದತ್ತ ಚರಿತ ; ಅವನಿಗೆ ಮುನಿದರ್ಶನವಾದುದು, ವಸುದೇವನಿಗೆ ನೀಲಯಶಾ ಮತ್ತು ಸೋಮಶ್ರೀಯರ ಲಾಭವಾದುದು, ವೇದೋತ್ಪತ್ತಿ, ಸೌದಾಸೋಪಾಖ್ಯಾನ, ವಸುದೇವನಿಗೆ ಕಪಿಲಾ ಮತ್ತು ಪದ್ಮವತಿ ಎಂಬ ಕನ್ಯೆಯರ ಲಾಭವಾದುದು, ಚಾರುಹಾಸಿನಿ ಮತ್ತು ರತ್ನವತಿ ಎಂಬವರು ದೊರೆತುದು, ಸೋಮದತ್ತನ ಸುತೆಯ ಲಾಭ, ವೇಗವತಿಯ ಸಮಾಗಮ, ಮದನವೇಗಾ ಎಂಬವಳ ಲಾಭ, ಬಾಲಚಂದ್ರಾವಲೋಕನ, ಪ್ರಿಯಂಗು ಸುಂದರಿಯ ಲಾಭ, ಬಂಧುಮತಿಯ ಸಮಾಗಮ, ಪ್ರಭಾವತಿಯ ಪ್ರಾಪ್ತಿ, ರೋಹಿಣಿಯ ಸ್ವಯಂವರ, ಸಂಗ್ರಾಮದಲ್ಲಿ ವಸುದೇವನು ಗೆದ್ದುದು ಮತ್ತು ತನ್ನ ಸೋದರರೊಂದಿಗೆ ಸಮಾಗಮವಾದುದು, ಬಲದೇವಸಮುತ್ಪತ್ತಿ; ಕಂಸೋಪಾಖ್ಯಾನ, ಜರಾಸಂಧನ ಮಾತಿನಂತೆ ಸಿಂಹರಥನ ಬಂಧನ, ಕಂಸನಿಗೆ ಜೀವದ್ಯಶೋಲಾಭ, ಅವನು ತನ್ನ ತಂದೆ ಉಗ್ರಸೇನನನ್ನು ಬಂಧಿಸಿದುದು, ದೇವಕಿಯೊಂದಿಗೆ ವಸುದೇವ ಸಮಾಗಮ, ಸತ್ಯವಾದಿ ಅತಿಮುಕ್ತಾದೇಶವು ಕಂಸಕ್ಷೋಭಕಾರಣವಾದುದು, ದೇವಕಿಯ ಪ್ರಸವವು ತನ್ನ ಮನೆಯಲ್ಲಾಗಲಿ ಎಂದು ವಸುದೇವನನ್ನು ಕಂಸನು ಪ್ರಾರ್ಥಿಸಿದುದು, ವಸುದೇವನು ಅತಿಮುಕ್ತಮುನಿಯನ್ನು ಪ್ರಶ್ನಿಸಿದುದು, ಅಷ್ಟಪುತ್ರರ ಭವಾಂತರವನ್ನು ಕೇಳಿದುದು, ಪಾಪಪ್ರಮಥನಕರವಾದ ನೇಮಿನಾಥಚರಿತವನ್ನರಿತುದು.

ವಾಸುದೇವೋತ್ಪತ್ತಿ, ಗೋಕುಲದಲ್ಲಿ ಅವನ ಬಾಲಚೇಷ್ಟೆಗಳು, ಬಲದೇವೋಪ



ದೇಶದಿಂದ ಸಮಸ್ತಶಾಸ್ತ್ರಗಳನ್ನು ಗ್ರಹಣಮಾಡಿದುದು, ಚಾಪರತ್ನವನ್ನು ಏರಿಸಿದುದು, ಕಾಲಿಂದಿಯಲ್ಲಿ ನಾಗನನ್ನು ಮರ್ದಿಸಿದುದು, ವಾಜಿ-ವಾರಣ-ಚಾಣೂರಮಲ್ಲ-ಕಂಸವಧೆ, ಉಗ್ರಸೇನನಿಗೆ ರಾಜ್ಯ ಸೇರಿದುದು, ಸತ್ಯಭಾಮೆಯೊಂದಿಗೆ ಕೃಷ್ಣನ ಪಾಣಿಗ್ರಹಣ, ಸರ್ವಜ್ಞಾತಿ ಸಮೇತನಾಗಿ ಹರಿಯು ಸಂತೋಷವಾಗಿದ್ದುದು, ಜೀವದ್ಯಶೋವಿಲಾಪ, ಅದರಿಂದಾಗಿ ಜರಾಸಂಧನ ಕ್ರೋಧ, ಯುದ್ಧಕ್ಕೆ ಕಳುಹಿದ ಕಾಲಯವನನ ಪರಾಜಯ, ಹರಿಯಿಂದ ರಣದಲ್ಲಿ ಅಪರಾಜಿತನು ಮೃತನಾದದ್ದು, ಶೌರಿಗಳ (ಯಾದವರ) ಪರಮಹರ್ಷ ಮತ್ತು ನಿರ್ಭೀತಿ.

ಸುತೋತ್ಪತ್ತಿ ನಿಮಿತ್ತವಾಗಿ ಶಿವಾದೇವಿಗೆ ಷೋಡಶಸ್ವಪ್ನದರ್ಶನ, ಅದರ ಫಲಗಳನ್ನು ಅವಳು ಪತಿಯಿಂದ ತಿಳಿದುಕೊಂಡುದು, ನೇಮಿನಾಥಸಮುದ್ಭವ, ಮೇರುವಿನಲ್ಲಿ ಅವನಿಗೆ ಜನ್ಮಾಭಿಷೇಕವಾದುದು, ಬಾಲಕ್ರೀಡಾಮಹೋದಯ, ಜರಾಸಂಧಾತಿಸಂಧಾನ, ಶೌರಿಸಾಗರಸಂಶ್ರಯ, ದೇವತಾಕೃತಮಾಯೆಯಿಂದ ಜರಾಸಂಧನನ್ನು ನಿರ್ವರ್ತಿಸಿದುದು, ವಿಷ್ಣು ಉಪವಾಸನಿಯಮಗೊಂಡು ದರ್ಭಶಯ್ಯೆಯಲ್ಲಿದ್ದುದು, ಇಂದ್ರವಚನದಂತೆ ಗೌತಮನಿಂದ ಸಮುದ್ರವನ್ನು ಸಂಕೋಚಗೊಳಿಸಿದುದು, ಕ್ಷಣಮಾತ್ರದಲ್ಲಿ ಅಲ್ಲಿ ದ್ವಾರವತಿಯ ನಿರ್ಮಾಣವು ಕುಬೇರನಿಂದಾದುದು, ರುಕ್ಮಿಣೀಹರಣ, ಭಾನು ಮತ್ತು ಪ್ರದ್ಯುಮ್ನರ ಜನನ, ಪೂರ್ವವೈರಿ ಧೂಮಕೇತುವೆಂಬವನಿಂದ ಪ್ರದ್ಯುಮ್ನನ ಅಪಹಾರ, ವಿಜಯಾರ್ಧದಲ್ಲಿ ಪ್ರದ್ಯುಮ್ನನ ಸ್ಥಿತಿ, ಪ್ರದ್ಯುಮ್ನನ ತಾಯಿತಂದೆಗಳಿಗೆ ನಾರದನಿಂದ ಇಷ್ಟ ಸಮಾಚಾರದ ಸೂಚನೆ, ಷೋಡಶಲಾಭಗಳು ಮತ್ತು ಪ್ರಜ್ಞಪ್ತಿವಿದ್ಯೆ ಇವುಗಳ ಪ್ರಾಪ್ತಿ, ಕಾಲಸಂವರನೊಂದಿಗೆ ಸಂಗ್ರಾಮ, ಪಿತೃಮಾತೃ ಸಮಾಗಮ. ಶಂಬೋತ್ಪತ್ತಿ, ಪ್ರದ್ಯುಮ್ನನ ಶಿಶುಕ್ರೀಡೆ, ವಸುದೇವನು ಪ್ರದ್ಯುಮ್ನನನ್ನು ಪ್ರಶ್ನಿಸಿದ್ದು, ಪ್ರದ್ಯುಮ್ನನಿಂದ ಅವನ ಭ್ರಮಣವೃತ್ತಾಂತವನ್ನು ಅರಿತುದು, ಸಕಲ ಯಾದವಕುಮಾರರೂ ಕೀರ್ತಿಸಿದುದು.

ವಾರ್ತೆ ತಿಳಿದು ಪ್ರತಿಶತ್ರು ಜರಾಸಂಧನು ಕೃಷ್ಣನಲ್ಲಿಗೆ ದೂತನನ್ನು ಕಳುಹಿದುದು, ಯಾದವಸಭೆಯಲ್ಲಿ ಕ್ಷೋಭವುಂಟಾದುದು, ಉಭಯಸೇನೆಗಳೂ ಎದುರಾದುದು, ವಿಜಯಾರ್ಧದಲ್ಲಿ ವಿದ್ಯಾಧರರಲ್ಲಿ ಕ್ಷೋಭವಾದುದು, ವಸುದೇವ ಪರಾಕ್ರಮ, ಅಕ್ಷೌಹಿಣೀ ಸೈನ್ಯಪ್ರಮಾಣ, ರಥಿ ಅತಿರಥ ಮಹಾರಥ ಸಮರಥ ಅರ್ಧರಥ ರಾಜರ ನಿರೂಪಣೆ, ಜರಾಸಂಧನ ಚಕ್ರವ್ಯೂಹವ್ಯಪೋಹಾರ್ಥವಾಗಿ ಕೃಷ್ಣನ ಸೇನೆಯಲ್ಲಿ ಗರುಡವ್ಯೂಹವನ್ನು ರಚಿಸಿದುದು, ಬಲಕೃಷ್ಣರಿಗೆ ಸಿಂಹಗಾರುಡ ವಿದ್ಯಾಪ್ರಾಪ್ತಿ, ನೇಮಿಯ ಸಾರಥಿಯರೂಪವಾಗಿ ಅವರ ಮಾವನ ಮಗನ ಆಗಮನ, ನೇಮಿ ಅನಾವೃಷ್ಣಿ ಮತ್ತು ಪಾರ್ಥನ ಮೂಲಕವಾಗಿ ಚಕ್ರವ್ಯೂಹಭೇದನ, ಪಾಂಡವರಿಗೆ ಕೌರವರೊಂದಿಗೆ ಯುದ್ಧ ಘಟಿಸಿದ್ದು, ಎರಡೂ ಸೈನ್ಯಗಳ ಸೇನಾಪತಿಗಳಾದ ಕೃಷ್ಣಜರಾಸಂಧರ ಮಹಾಯುದ್ಧ, ಚಕ್ರರತ್ನದ ಉತ್ಪತ್ತಿ, ವಿಷ್ಣುವಿನಿಂದ ಜರಾಸಂಧವಧೆ, ವಸುದೇವನಿಗೆ ವಿದ್ಯಾಧರಿಯರಿಂದ ಕೃಷ್ಣವಿಜಯದ ಸಮಾಚಾರ ತಿಳಿದುದು, ಕೃಷ್ಣನಿಂದ ಕೋಟಿಶಿಲೋತ್ಕ್ಷೇಪ, ವಸುದೇವಾ